ಒಳಗೆ ಏನೋ ಖಾಲಿ. ಎದೆಯಲ್ಲಿ ತೂತು ಬಿದ್ದ ಹಾಗೆ. ಹೆಜ್ಜೆಯಿಡಲು ಹಿಂದೇಟು ಹಾಕುತ್ತಿದ್ದ ರಾಮಚಂದ್ರನನ್ನು ಬಲವಂತವಾಗಿ ಎಬ್ಬಿಸಿದಳು. ಅವರು ಶಿವಮೊಗ್ಗ ರಸ್ತೆ ಹಿಡಿಯುವ ವೇಳೆಗಾಗಲೆ ಸಂಜೆ ನಾಲ್ಕೂವರೆ ದಾಟಿತ್ತು. ಹಿಂದಿನ ದಿನ ಗೆಳೆಯರ ಅಡ್ಡೆಯಲ್ಲಿ ಶಿವಮೊಗ್ಗಕ್ಕೆ ಹೋಗುವ ವಿಷಯ ಪ್ರಸ್ತಾಪವಾದಾಗ ಒಬ್ಬರು ಕಡೂರು, ಬೀರೂರು ರಸ್ತೆ ಸುರಕ್ಷಿತವಾದದ್ದು ಅಂದಾಗ ಸಂತೋಷನು 'ಲಿಂಗದಹಳ್ಳಿ ರಸ್ತೇಲಿ ಬೆಟ್ಟ, ಕಾಫಿತೋಟದ ಒಳಗೆ ಹೋಗೋದು ಸಕ್ಕತ್ತು ಮಜ ಕೊಡುತ್ತೆ ಕಣೊ... ಅಲ್ಲೇ ಹೋಗಿ' ಅಂದು, 'ಯಾವಾಗಲೂ ಸೇಫ್ ಆಗೋ ಬಗ್ಗೇನೆ ಯೋಚನೆ ಮಾಡಿದ್ರೆ ಜೀವನ ಎಂಜಾಯ್ ಮಾಡೋದು ಯಾವಾಗ್ರೋ?' ಅಂದಿದ್ದ. 'ಹಂಗಲ್ಲೋ... ನಾವು ಹುಡುಗರೇ ಹೋದಾಗ ಸರಿ, ಫ್ಯಾಮಿಲಿ ಜೊತೆ ಹೋಗುವಾಗ ಅದನ್ನೆಲ್ಲ ಯೋಚನೆ ಮಾಡಬೇಕು' ಅಂತ ಚಂದ್ರ ಅಂದಾಗ, 'ಏ... ಸೇಫು, ಡೇಂಜರು ಅಂತ ಬೇರೆ ಬೇರೆ ಬೋಗಿ ಇರಲ್ಲೊ ಮಾರಾಯ, ನಮಗೆ ಆ ಪರಿಸ್ಥಿತೀಲಿ ಹೆಂಗೆ ಅನುಭವ ಆಗುತ್ತೋ ಹಂಗೆ ಅಷ್ಟೆ' ಅಂತ ಸಂತೋಷ ಬಹಳ ಸಹಜವಾಗಿ ಹೇಳಿ, 'ನಿನ್ನಿಷ್ಟ ರಾಮು, ಹೆಂಗೂ ಬೇಗ ಹೊರಡ್ತಿರಲ್ಲ, ಹಗಲು ಹೊತ್ತಲ್ಲಿ ಹೋದರೆ ಏನೂ ತೊಂದರೆ ಇರಲ್ಲ. ಈ ರಸ್ತೆಯಲ್ಲಿ ಹೋಗಲಿಲ್ಲ ಅಂದ್ರೆ ಬದುಕಿನ ಒಂದು ಸುಂದರ ಅನುಭವ ಕಳ್ಕೊತಿಯ ನೋಡು' ಅಂತ ನಕ್ಕಿದ್ದ.

ರಾಮಚಂದ್ರ ಮತ್ತು ಕುಸುಮ ಚಿಕ್ಕಮಗಳೂರಿನಿಂದ ಹತ್ತು–ಹದಿನೈದು ಕಿಲೋಮೀಟರ್ ಬಂದಿದ್ದರು. ಅಲ್ಲೊಂದು ಕಡೆ ರಸ್ತೆಯು ಕವಲಾಗಿ ಎತ್ತ ಕಡೆ ಹೋಗಬೇಕು ಅಂತ ರಾಮಚಂದ್ರನಿಗೆ ಅನುಮಾನವಾಯಿತು. ಅವನು ಕಾರಿನಿಂದ ಇಳಿದು ಅತ್ತಿತ್ತ ನೋಡಿದ, ಅಲ್ಲಿ ಒಂದು ಜನವೂ ಕಾಣಲಿಲ್ಲ. ಕಾರಿಗೆ ಬೆನ್ನು ಒರಗಿಸಿ ನಿಂತು ರಾಮಚಂದ್ರ ಸಿಗರೇಟು ಹಚ್ಚಿ ಸೇದತೊಡಗಿದ. ಮನಸ್ಸಿನ ತುಂಬ ಸಂತೋಷನ ನೆನಪು, ಮಾತುಗಳು ಗಿರಗಿಟ್ಟಲೆ ಹೊಡೆಯುತ್ತಿದ್ದವು. ದಾರಿಯುದ್ದಕ್ಕೂ ಹೆಂಡತಿ ಜೊತೆ ಏನೊಂದೂ ಮಾತಾಡಿರಲಿಲ್ಲ ಅಂತ ಅವನಿಗೆ ಈಗ ತತ್ಕ್ಷಣ ಅರಿವಾಗಿ ತನ್ನ ಮೇಲೆ ತನಗೆ ಜಿಗುಪ್ಸೆ, ಬೇಸರವಾಯಿತು. ಹೆಂಡತಿಯ ಕಡೆ ತಿರುಗಿ ನೋಡಿದ. ಅವಳು ಎದುರಿನ ನಿರ್ಜನ ರಸ್ತೆಯನ್ನು ನೋಡುತ್ತ ಕುಳಿತಿದ್ದಳು. ಪ್ರಯಾಣ ಮಾಡುವಾಗ ಒಂದು ಕ್ಷಣವೂ ಸುಮ್ಮನಿರದೆ ಸದಾ ವಟವಟ ಮಾತಾಡುತ್ತಲೇ ಇರುತ್ತಿದ್ದ ಕುಸುಮಳನ್ನೂ ಸಂತೋಷನ ಸಾವು ಮೌನಕ್ಕೆ ತಳ್ಳಿತ್ತು. ಕುಸುಮನ ಜೊತೆ ಪ್ರಯಾಣ ಮಾಡುವುದೇ ರಾಮಚಂದ್ರನಿಗೆ ಯಾವತ್ತೂ ಖುಷಿಯ ಸಂಗತಿ. ಪ್ರಯಾಣವೆಂದರೆ ತಲುಪಬೇಕಾದ ಸ್ಥಳ ಮಾತ್ರವಲ್ಲ, ಕ್ರಮಿಸುವ ದಾರಿಯಲ್ಲಿರುವ ಸುಖ ಅನ್ನುವುದನ್ನು ರಾಮಚಂದ್ರನಿಗೆ ತೋರಿಸಿಕೊಟ್ಟವಳು ಕುಸುಮಳೇ. ಎದುರಿಗೆ ಕಾಣುವ ಮೋಡ, ಕಾರಿನ ಗಾಜಿನ ಮೇಲೆ ಬಿದ್ದುರುಳುವ ಮಳೆಹನಿ, ದಾರಿಬದಿಯ ಹಸು, ಕರು ಇತ್ಯಾದಿ ಎಲ್ಲವನ್ನೂ ಅವಳು ಎಲ್ಲರ ಅನುಭವದ ವಸ್ತುವಾಗಿ ಮಾಡಿಬಿಡುತ್ತಿದ್ದಳು. ಮಾರುದೂರಕ್ಕೊಮ್ಮೆ ಕಾರು ನಿಲ್ಲಿಸಿ ಕಡ್ಲೆಕಾಯಿ, ಹಲಸಿನಹಣ್ಣು, ದಾರಿಬದಿ ಮಾರುವ ತರಕಾರಿ ಏನೇನೋ ಕೊಳ್ಳಬೇಕು. ಕೆರೆ ಕಂಡರೆ ನಿಲ್ಲಿಸಬೇಕು. ಹಸುವಿನ ಕರು, ಕುರಿಮರಿ ಎದುರಾದರೆ ಮುದ್ದಾಡಬೇಕು... ಯಾವ ವರ್ಷವೂ ತಮ್ಮ ಮದುವೆಯ ದಿನವೂ ನೆನಪಿರದ ರಾಮಚಂದ್ರನಿಗೆ, ಅವಳ ಸಾಹಚರ್ಯದಲ್ಲಿ ತನ್ನ ದಾಂಪತ್ಯ ಬದುಕು ಹದಿನೈದು ವರ್ಷಗಳನ್ನು ಕಳೆದಿತ್ತು ಅನ್ನುವುದು ಆ ಕ್ಷಣ ಹೊಳೆದು, '...ಎಷ್ಟು ದೀರ್ಘ ಪ್ರಯಾಣ!' ಅನ್ನಿಸಿತು.

ಕುಸುಮ ತುಂಬ ಸೂಕ್ಷ್ಮ ಸ್ವಭಾವದವಳು. ಗಂಡನ ಉಸಿರಿಂದಲೇ ಅವನ ಮನಸ್ಥಿತಿಯನ್ನು ಊಹಿಸಬಲ್ಲವಳು. ಬೆಳಗ್ಗಿನಿಂದ ಗಂಡನನ್ನು ಸಂಭಾಳಿಸಿ ಅವಳು ಹೈರಾಣಾಗಿದ್ದಳು. ಯಾತಕ್ಕಾಗಿ ಜೀವನದಲ್ಲಿ ಇಷ್ಟೊಂದು ಹೋರಾಟ? ಒಂದು ದಿನ ಎಲ್ಲ ಹೀಗೆ ಬಿಟ್ಟು ಹೋಗುವುದೇ ಆದರೆ ಜಗತ್ತಿನಲ್ಲಿ ಯಾಕಿಷ್ಟು ಸಂಕಟಗಳಿವೆ ಅಂತ ಅವಳ ಮನಸ್ಸು ಬೆಳಗ್ಗಿನಿಂದ ನೂರಾರು ಸಾರ್ತಿ ಕೇಳಿಕೊಂಡಿತ್ತು. ಸಂತೋಷ ಎಷ್ಟೋ ಸಲ ಅವರ ಮನೆಗೆ ಬಂದಿದ್ದ, ಕುಸುಮ ಮಾಡುವ ಉಬ್ಬು ರೊಟ್ಟಿಯನ್ನು ಇಷ್ಟಪಟ್ಟು ತಿಂದಿದ್ದ. ಇವೆಲ್ಲ ನೆನಪಾಗಿ ಕುಸುಮನ ಕಣ್ಣಿಂದ ನೀರು ಧುಮುಗುಡತೊಡಗಿತು. ಎರಡು ದಿನ ಮೊದಲೇ ಅಜ್ಜಿ ಜೊತೆ ಮದುವೆ ಮನೆಗೆ ಹೋಗಿದ್ದ